# ಕರ್ನಾಟಕ ಜಾನಪದ ಪರಿಷತ್ತು
## ಬೆಂಗಳೂರು



ದಿನಾಂಕ : 30.11.2019, ಸಂಜೆ 5 ಗಂಟೆಗೆ ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು

**"ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ" ಪ್ರದಾನ**

ಮತ್ತು

**'ಭೂಮಿಗೆ ಬಂದ ಗಂಧರ್ವ' ಪುಸ್ತಕ ಬಿಡುಗಡೆ ಸಮಾರಂಭ**

**ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆ**

**ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳು**

ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶ್ರೀ ಕ್ಷೇತ್ರ, ಆದಿಚುಂಚನಗಿರಿ

ಪ್ರಶಸ್ತಿ ಪ್ರದಾನ

**ಶ್ರೀ ಸಿ.ಟಿ. ರವಿ**

ಮಾನ್ಯ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಹಾಗೂ ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ





ಪ್ರಶಸ್ತಿ ಪುರಸ್ಕೃತರು

**ಶ್ರೀ ಎಂ. ಆರ್. ಬಸಪ್ಪ**

ವೀರಗಾಸೆ ಕಲಾವಿದರು

ಅಧ್ಯಕ್ಷತೆ

**ಶ್ರೀ ಟಿ. ತಿಮ್ಮೇಗೌಡ** ಐ.ಎ.ಎಸ್ (ನಿ)

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು

ಮುಖ್ಯ ಅತಿಥಿಗಳು

**ಶ್ರೀ ಆರ್. ಆರ್. ಜನ್ನು** ಐ.ಎ.ಎಸ್.

ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ

**ಶ್ರೀ ಎಸ್. ರಂಗಪ್ಪ** ಕೆ.ಎ.ಎಸ್.

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಸ್ವಾಗತ ಮತ್ತು ಪ್ರಾಸ್ತಾವಿಕ

**ಶ್ರೀ ಆದಿತ್ಯ ನಂಜರಾಜ್**

ಮ್ಯಾನೇಜಿಂಗ್ ಟ್ರಸ್ಟಿ, ಕರ್ನಾಟಕ ಜಾನಪದ ಪರಿಷತ್ತು

ವಂದನಾರ್ಪಣೆ

**ಡಾ. ರಾಜೇಗೌಡ ಹೊಸಹಳ್ಳಿ**

ಗೌರವ ಕಾರ್ಯದರ್ಶಿಗಳು, ಕರ್ನಾಟಕ ಜಾನಪದ ಪರಿಷತ್ತು

ಆದರದ ಸ್ವಾಗತ

**ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ**

# ನಾಡೋಜ ಎಚ್.ಎಲ್. ನಾಗೇಗೌಡ
# ರಾಷ್ಟ್ರೀಯ ಪ್ರಶಸ್ತಿ 5ನೇ ವರ್ಷದ ಸಮಾರಂಭ
## ಶ್ರೀ ಎಂ. ಆರ್. ಬಸಪ್ಪ
### ವೀರಗಾಸೆ ಕಲಾವಿದರು



ನಾಡಿನ ಪ್ರಸಿದ್ಧ ಸಾಹಿತಿ, ಪ್ರವಾಸಿ ಇಂಡಿಯಾ ಮಾಲಿಕೆಯ ಕರ್ತೃ, ಜಾನಪದಲೋಕ ನಿರ್ಮಾತೃ ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಅವರು ಕಟ್ಟಿ ಬೆಳೆಸಿದ 'ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆ ಪ್ರತಿ ವರ್ಷ ರಾಷ್ಟ್ರಮಟ್ಟದ ಜಾನಪದ ಕಲಾವಿದರನ್ನು ಗುರುತಿಸಿ ಒಂದು ಲಕ್ಷ ರೂ.ಗಳನ್ನೊಳಗೊಂಡ ಪ್ರಶಸ್ತಿ ನೀಡುತ್ತದೆ. 2015ರಲ್ಲಿ ಪದ್ಮಶ್ರೀ, ಪದ್ಮಭೂಷಣ, ಪಾಂಡವಾನಿ ಕಲಾವಿದೆ ಶ್ರೀ ತೀಜನ್ ಬಾಯಿಯವರಿಗೆ, 2016ರಲ್ಲಿ ಮಣಿಪಾಲದ ಹಸ್ತಶಿಲ್ಪ ಟ್ರಸ್ಟ್‌ನ ರೂವಾರಿ ಶ್ರೀ ವಿಜಯನಾಥ ಶೆಣೈ ಅವರಿಗೆ, 2017ರಲ್ಲಿ ರಾಜಸ್ಥಾನಿ ಜನಪದ ಸೂಫಿ ಕಲಾವಿದರಾದ ಪದ್ಮಶ್ರೀ ಶ್ರೀ ಮುಖ್ತಿಯಾರ್ ಅಲಿಯವರಿಗೆ ಹಾಗೂ 2018ರಲ್ಲಿ ತೊಗಲು ಗೊಂಬೆ ಯಕ್ಷಗಾನ ಕಲಾವಿದರಾದ ನಾಡೋಜ ಶ್ರೀ ಬೆಳಗಲ್ಲು ವೀರಣ್ಣ ಅವರಿಗೆ ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

2019ರ 'ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ'ಯನ್ನು ವೀರಗಾಸೆ ಕಲಾವಿದರಾದ ಶ್ರೀ ಎಂ.ಆರ್. ಬಸಪ್ಪ ಅವರಿಗೆ ನೀಡಲಾಗುತ್ತಿದೆ. 'ಆಹಹಹ ರುದ್ರ, ಆಹಹಹಾ ದೇವ' ಎನ್ನುತ್ತಾ.... ಪುರಾಣ ಕಾಲದ ದಕ್ಷಸಂಹಾರದ ಘಟನೆಯನ್ನು ಈಗಿಗು ಎಳೆತಂದು ಆರ್ಭಟಿಸುವ, ಆಕ್ರೋಶಿಸಿ ಅಭಿವ್ಯಕ್ತಿಸುವ ಜನಪದ ಕುಣಿತ 'ವೀರಗಾಸೆ'. ಎಲ್ಲಾ ರೀತಿಯಿಂದಲೂ ಸೆಳೆವು ಕಾಯ್ದುಕೊಳ್ಳುವಂತಹ ಕಲೆ. ಈ ಕಲೆಯ ಶ್ರೇಷ್ಟ ಕಲಾವಿದರು ಶ್ರೀ ಎಂ.ಆರ್. ಬಸಪ್ಪ ಅವರು. ಸಾಧಾರಣ ಮೈಕಟ್ಟಿನ, ಸದಾ ಜುಬ್ಬ ಪಂಚೆ ತೊಡುವ ಖಡ್ಗಧಾರಿಯ ಕೈ ಮೈ ಹೆಜ್ಜೆ ದೇಹಕ್ಕೆ ದೇಹವೆ ಕುಣಿತದ ಸೊಗಸುಗಾರಿಕೆಗೆ ಒಳಗಾಗುತ್ತದೆ. ಇಂತಹ ಈ ಕಲೆಗೆ ವಿಶಿಷ್ಟ ಸೊಗಸು ತುಂಬಿದವರು ಬಸಪ್ಪ ಅವರು. ಕಲೆಯ ಚೆಲುವು ಚಂದವನ್ನೆಲ್ಲಾ ಬೆರಗಲ್ಲಿ ದಿಟ್ಟಿಸಿ ತಮ್ಮೊಳಗೆ ಗಟ್ಟಿಸಿ ಮೈಯಾನು ಮೈಯಲ್ಲಾ ಇಡಿಕಿರಿಸಿ ತುಂಬಿಕೊಂಡವರು. ಕುಣಿತದ ಹಳೆಯ ಬಗೆಯ ಗತ್ತುಗಳಿಗೆ ಹೊಸ ಸೊಗಸುಗಳ ಮಿಳಿತಗೊಳಿಸಿ ಕಲೆಯನ್ನು ಸಮೃದ್ಧಿಗೊಳಿಸಿದವರು ಇವರು.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಮಾಳೇನಹಳ್ಳಿ ಗ್ರಾಮದವರಾದ ಇವರು ಈ ಕಲೆಯೊಂದಿಗೆ ತಮ್ಮ ಜೀವಿತವನ್ನೇ ಕಳೆದಿದ್ದಾರೆ. ಎಳೆವೆಯಲ್ಲಿ ಈ ಕಲೆಯತ್ತ ಸ್ವಯಂ ಆಸಕ್ತಿಯಿಂದ ರೂಢಿಸಿಕೊಂಡು ಕರಗತ ಮಾಡಿಕೊಂಡು ನಾಡಿನಾದ್ಯಂತ ಪ್ರದರ್ಶಿಸಿದ್ದಾರೆ. ತಾವು ಕುಣಿದುದಲ್ಲದೆ ಸುತ್ತಿನ ಸೀಮೆಯಲ್ಲಿ ಕಲೆಯ ಅಸಂಖ್ಯ ತಂಡಗಳು ರೂಪ ಪಡೆಯಲು ಕಾರಣರಾಗಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿ ಯುವಜನರಿಗೆ, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆಲ್ಲಾ ತರಬೇತು ನೀಡಿ ಕಲಿಸಿದ್ದಾರೆ.

ಎಂಬತ್ತರ ಹರೆಯದ ಈ ಹಿರಿಯರಿಗೆ ಈಗಾಗಲೆ ಜಾನಪದ ಲೋಕದ 'ಎಚ್.ಎಲ್. ನಾಗೇಗೌಡ ಪ್ರಶಸ್ತಿ', 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ', ಕರ್ನಾಟಕ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ', ಜಾನಪದ ಕ್ಷೇತ್ರದ ಸಾಧಕರಿಗೆ ನೀಡುವ ಅತ್ಯುಚ್ಛ ಪ್ರಶಸ್ತಿ 'ಜಾನಪದಶ್ರೀ' ಗೌರವಗಳು ಸಂದಿವೆ.